ಸಿ.ಸಿ.ನಂಃ 21/2021
ಪಿಡಬ್ಲ್ಯು-1

ಸಾಕ್ಷಿಗೆ ಪ್ರಮಾಣ ವಚನ ಬೋದಿಸಲಾದ ದಿನಾಂಕಃ 28-10-2022

ಪಾಟೀ ಸವಾಲುಃ ಶ್ರೀ ಎನ್.ಕೆ. ವಕೀಲರಿಂದ

ನಾನು ಕಳೆದ 16 ವರ್ಷಗಳಿಂದ ನ್ಯಾಯವಾದಿಯಾಗಿ ಮಂಗಳೂರಿನಲ್ಲಿ ಕೆಲಸ ಮಾಡುತಿದ್ದು, ಹಲವಾರು ಕ್ರಿಮಿನಲ್ ಪ್ರಕರಣಗಳನ್ನು ನಡೆಸುತ್ತಿದ್ದೇನೆ. ನನಗೆ, ಮಂಗಳೂರಿನಲ್ಲಿ ಸ್ವಂತ ಕಚೇರಿ ಇರುತ್ತದೆ. ನಾನು ವರ್ಗಾವಣೆಯ ಅಧಿನಿಯಮಗಳ ಅಡಿಯಲ್ಲಿ ಹಲವಾರು ಪ್ರಕರಣಗಳನ್ನು ನಡೆಸಿರುತ್ತೇನೆ. ದಿನಾಂಕ 29.09.2020 ರಂದು ಪೂರ್ಣಿಮಾ ಎಂಬ ಕಕ್ಷಿಗಾರ ಜೊತೆ ಉಡುಪಿಯ ಸೈಬರ ಪೊಲೀಸ್ ಠಾಣೆಗೆ ನಾನು ಹೋಗಿರುವುದಿಲ್ಲ. ಹಾಗೆಯೇ, ಯಾವುದೇ ಪೊಲೀಸ್ ಠಾಣೆಗೆ ಪೂರ್ಣಿಮಾ ಎಂಬ ಕಕ್ಷಿಗಾರರ ಜೊತೆ ನಾನು ಹೋಗಿರುವುದಿಲ್ಲ. ನನಗೆ ಪೂರ್ಣಿಮಾ ಎಂಬುವವರ ಪರಿಚಯವಿರುತ್ತದೆ. ನನ್ನ ಸ್ನೇಹಿತರಾದ ಅಶೋಕ ಶೆಟ್ಟಿ ರವರು, ನನಗೆ ಪೂರ್ಣಿಮಾರವರನ್ನು ಪರಿಚಯ ಮಾಡಿಕೊಟ್ಟಿರುತ್ತಾರೆ. ಸದರಿ ಅಶೋಕ ಶೆಟ್ಟಿಯವರು ನಂದಿಕೂರಿನವರಾಗಿರುತ್ತಾರೆ. ಸದರಿ ಅಶೋಕ ಶೆಟ್ಟಿಯವರು ನನ್ನ ಸ್ನೇಹಿತರಾಗಿದ್ದರು. ನನಗೆ ವೈಯಕ್ತಿಕವಾಗಿ ಪೂರ್ಣಿಮಾರವರ ಪರಿಚಯವಿರುವುದಿಲ್ಲ. ನನ್ನ ಸ್ನೇಹಿತರಾದ ಅಶೋಕ ಶೆಟ್ಟಿರವರು ನನಗೆ ಪೂರ್ಣಿಮಾರವರನ್ನು ಪರಿಚಯ ಮಾಡಿಕೊಟ್ಟಿದ್ದರು. ನನ್ನ ಸ್ನೇಹಿತ ಅಶೋಕ ಶೆಟ್ಟಿ ಹಾಗೂ ಆರೋಪಿಯ ಅಕ್ಕನ ಮಗನಾದ ಶಶಿಕಾಂತ ಶೆಟ್ಟಿಗಾರರು ಪರಸ್ಪರ ಸ್ನೇಹಿತರಾಗಿದ್ದರ. ಆರೋಪಿಗೆ ಹಣದ ಅವಶ್ಯಕತೆ ಇದೆ ಎಂದು ಅಶೋಕ ಶೆಟ್ಟಿರವರು ನನಗೆ ತಿಳಿಸಿದ್ದು, ಆ ಪ್ರಕಾರವಾಗಿ ನಾನು ಆರೋಪಿಗೆ ಹಣವನ್ನು ನೀಡಿರುತ್ತೆನೆ. ನಾನು ಲೇವಾದೇವಿ ವ್ಯವಹಾರವನ್ನು ನಡೆಸುವುದಿಲ್ಲ. ನಾನು ಕಡಬ ತಾಲೂಕಿನ ಎಡಮಂಗಲದ ವಾಸಿಯಾಗಿರುತ್ತೇನೆ. ಮುಲ್ಕಿಯಲ್ಲಿ ನನ್ನ ಸ್ವಂತ ಮನೆ ಹಾಗೂ ಮಂಗಳೂರಿನಲ್ಲಿ ನನಗೆ ಬಾಡಿಗೆ ಮನೆ ಇರುತ್ತದೆ. ಪೂರ್ಣಿಮಾ ರವರ ಸರ್ಪಾಕದಲ್ಲಿ ನಾನು ಇರುವುದಿಲ್ಲ. ಅಶೋಕ ಶೆಟ್ಟಿಗೆ ಪೂರ್ಣಿಮಾರವರ ಪರಿಚಯ ಹೇಗೆ ಆಯಿತು ಎಂದು ನನಗೆ ತಿಳಿದಿರುವುದಿಲ್ಲ. ಅಶೋಕ ಶೆಟ್ಟಿಗೆ ನೇರವಾಗಿ ಆರೋಪಿಯ ಪರಿಚಯ ಇದೆಯೋ ಇಲ್ಲವೋ ಎಂದು ನನಗೆ ತಿಳಿದಿರುವುದಿಲ್ಲ. ಶಶಿಕಾಂತ ಶೆಟ್ಟಿಗಾರ ಹಾಗೂ ಅಶೋಕ ಶೆಟ್ಟಿರವರು ಪರಿಸ್ಪರ ಸ್ನೇಹಿತರಾಗಿರುತ್ತಾರೆ. ನನಗೆ ಮಲ್ಲಿಕಾ ಎಂಬುವವರ ಪರಿಚಯವಿರುತ್ತದೆ. ಸದರಿ ಮಲ್ಲಿಕಾರವರು ಪ್ರಸ್ತುತ ನನ್ನ ಸಂಪರ್ಕದಲ್ಲಿರುವುದಿಲ್ಲ. ಸದರಿ ಮಲ್ಲಿಕಾರವರು ನನ್ನ ಸ್ನೇಹಿತರಾದ ಅಶೋಕ ಶೆಟ್ಟಿರವರ ಸಂಬಂದಿಕರಾಗಿರುತ್ತಾರೆ. ಸದರಿ ಮಲ್ಲಿಕಾ ರವರ ವೈಯಕ್ತಿಕ ಪರಿಚಯ ನನಗೆ ಇರುವುದಿಲ್ಲ . ಮಲ್ಲಿಕಾರವರು ಅಶೋಕ ಶೆಟ್ಟಿರವರೊಂದಿಗೆ ನನ್ನ ಕಚೇರಿಗೆ ಬಂದಿದ್ದು ಆ ರೀತ್ಯಾ ನನಗೆ ಮಲ್ಲಿಕಾರವರ ಪರಿಚಯವಾಗಿರುತ್ತದೆ. ಅಶೋಕ ಶೆಟ್ಟಿರುವರು ಒಂದು ಬಾಡಿಗೆ ಒಪ್ಪಂದದ ಕರಾರಿಗೆ ಸಂಬಂಧಪಟ್ಟು, ಸದರಿ ಮಲ್ಲಿಕಾರವರನ್ನು ನನ್ನ ಕಚೇರಿಗ ಕರೆದುಕೊಂಡು ಬಂದಿರುತ್ತಾರೆ. ಸದರಿ ಮಲ್ಲಿಕಾರವರು ನನ್ನ ಕಚೇರಿಗೆ ಸಾಕ್ಷಿದಾರರಾಗಿ ಬಂದಿದ್ದರೋ ಅಥವಾ ಕಕ್ಷಿಗಾರರಾಗಿ ಬಂದಿದ್ದರೋ ಎಂದು ನನಗೆ ನೆನಪು ಇರುವುದಿಲ್ಲ. ನಂತರ ಮಲ್ಲಿಕಾರವರು ನನ್ನ ಕಚೇರಿಗೆ ಬೇರೊಂದು ಪ್ರಕರಣದ

ಸಲುವಾಗಿ ನನ್ನ ಕಚೇರಿಗೆ ಬಂದಿರುತ್ತಾರೆ. ಮಲ್ಲಿಕಾರವರ ಹಾಗೂ ಈ ಪ್ರಕರಣದ ಆರೋಪಿಯ ಪರಿಚಯ ನನಗೆ ಇತ್ತಾ ಎಂದರೆ ಸಾಕ್ಷಿಯು ಅಶೋಕ ಶೆಟ್ಟಿರವರು ಮಲ್ಲಿಕಾ ಎಂಬುವವರ ಮುಖಾಂತರ ಆರೋಪಿಗೆ ಹಣ ನೀಡಿರುವ ಬಗ್ಗೆ ತದನಂತರದ ದಿನಗಳಲ್ಲಿ ನನಗೆ ತಿಳಿದಿರುತ್ತದೆ ಎಂದು ನುಡಿಯುತ್ತಾರೆ . ಅಶೋಕ ಶೆಟ್ಟಿರವರು ಹಾಗೂ ಪೂರ್ಣಿಮಾ ರವರು, ಆರೋಪಿಯನ್ನು ನನ್ನ ಕಚೇರಿಗೆ ಕರೆದುಕೊಂಡು ಬಂದಿದ್ದಾರೆ ಎಂದು ಹೇಳುವ ಸಮಯದಲ್ಲಿ ಆರೋಪಿಗೂ ಹಾಗೂ ಪೂಣಿರ್ಮಾರವರ ಮಧ್ಯದಲ್ಲಿ ಹಣದ ವ್ಯವಹಾರ ಇತ್ತೊ ಇಲ್ಲವೋ ಎನ್ನುವ ವಿಚಾರ ನನಗೆ ಆ ಸಮಯದಲ್ಲಿ ತಿಳಿದಿರುವುದಿಲ್ಲ. ಆದರೆ ತದನಂತರದ ದಿನಗಳಲ್ಲಿ ಸದರಿ ವಿಚಾರ ನನ್ನ ಗಮನಕ್ಕೆ ಬಂದಿರುತ್ತದೆ. ಆರೋಪಿ, ಅಶೋಕ ಶೆಟ್ಟಿರವರು ಹಾಗೂ ಶಶಿಕಾಂತ ಶೆಟ್ಟಿಗಾರರ ಜೊತೆ ನನ್ನ ಕಚೇರಿಗೆ ಹಲವಾರು ಬಾರಿ ಭೇಟಿ ಮಾಡಿರುತ್ತಾರೆ. ನಾನು ಆರೋಪಿಗೆ ನೀಡಿದ ಹಣದ ವ್ಯವಾಹರದ ಬಗ್ಗೆ ಅಶೋಕ ಶೆಟ್ಟಿ ಶಶಿಕಾಂತ ಶೆಟ್ಟಿಗಾರ ಹಾಗೂ ಆರೋಪಿಯ ಹೊರತಾಗಿ ಬೇರೆ ಯಾರಿಗೂ ಸದರಿ ಹಣದ ವ್ಯವಹಾರದ ಬಗ್ಗೆ, ಆ ಸಮಯದಲ್ಲಿ ತಿಳಿದಿರುವುದಿಲ್ಲ. ನನ್ನ ಕಚೇರಿಯಲ್ಲಿ ಕಂಪ್ಯೂಟರ್ ಹಾಗೂ ಲ್ಯಾಪ್ಟಾಪ್ ಇರುತ್ತದೆ. ನನ್ನ ಕಚೇರಿಯ ಕಂಪ್ಯೂಟರ್ ನ್ನು ನನ್ನ ಸಹೋದ್ಯೊಗಿಯಾದ ವಿಜಯ ಹಾಗೂ ರಾಹುಲ್ ರವರು ನಿರ್ವಹಿಸುತ್ತಾರೆ. ಆರೋಪಿಯು ನನ್ನ ಕಚೇರಿಗೆ 2018 ಮಾರ್ಚ ತಿಂಗಳ ಮೊದಲ ವಾರದಂದು ಬಂದಿದ್ದರು. ಆರೋಪಿಯು ಅಶೋಕ ಶೆಟ್ಟಿ ಮುಖಾಂತರ ನನ್ನಲ್ಲಿ ಸಾಲವನ್ನು ಕೇಳಿರುತ್ತಾರೆ . ಆರೋಪಿಯು 2018 ರ ಮಾರ್ಚ್ ತಿಂಗಳಲ್ಲಿ 3-4 ಬಾರಿ ನನ್ನ ಕಚೇರಿಗೆ ಭೇಟಿ ನೀಡಿದ್ದರು, ಆದರೆ ಯಾವ ನಿರ್ದಿಷ್ಟ ದಿನಾಂಕ ಎಂದು ಈಗ ನನಗೆ ಹೇಳಲು ಬರುವುದಿಲ್ಲ. ಹಾಗೆ ಭೇಟಿ ನೀಡಿದ ಸಮಯದಲ್ಲಿ ಸದರಿ ಆರೋಪಿಯು ನನ್ನ ಕಚೇರಿಗೆ ಮಧಾಹ್ನ 3 ರಿಂದ 5.30 ಗಂಟೆಯ ಒಳಗಾಗಿ ಭೇಟಿ ನೀಡಿರುತ್ತಾರೆ. ಹಾಗೆ 3-4 ಬಾರಿ ಆರೋಪಿಯು ನನ್ನ ಕಚೇರಿಗೆ ಭೇಟಿ ನೀಡಿದ ಸಮಯದಲ್ಲಿ ನನ್ನ ಹೊರತಾಗಿ ನನ್ನ ಕಚೇರಿಯಲ್ಲಿ ಬೇರೆ ಯಾರು ಇರಲಿಲ್ಲ. ನಾನು ಆರೋಪಿಗೆ ಸಾಲವನ್ನು 2018 ರ ಮಾರ್ಚ ತಿಂಗಳ 2-3 ಹಾಗೂ 4 ನೇ ವಾರಗಳಲ್ಲಿ ನೀಡಿರುತ್ತೇನೆ. ನನ್ನ ಸ್ನೇಹಿತರಾದ ಅಶೋಕ ಶೆಟ್ಟಿರವರು ಆರೋಪಿಗೆ ಹಣವನ್ನು ನೀಡುವ ಸಲುವಾಗಿ ಪದೇ ಪದೇ ನನ್ನಲ್ಲಿ ಕೇಳಿದ್ದರಿಂದ ದಿನಾಂಕವನ್ನು ನಿಗದಿಪಡಿಸಿ ನಾನು ಆರೋಪಿಗೆ ಹಣವನ್ನು ನೀಡಿರುತ್ತೆನೆ. ನಾನು 2018 ರ ಮಾರ್ಚ 2 ನೇ ವಾರದಂದು 2 ಲಕ್ಷ , 3 ನೇ ವಾರದಂದು 3 ಲಕ್ಷ ಹಾಗೂ 4 ನೇ ವಾರದಂದು 2 ಲಕ್ಷವನ್ನು ನೀಡಿರುತ್ತೆನೆ. ಸದರಿ ಎಲ್ಲಾ ಸಾಲವನ್ನು ನಾನು ಆರೋಪಿಗೆ ಖುದ್ದಾಗಿ ನನ್ನ ಕಚೇರಿಯಲ್ಲಿ ನೀಡಿರುತ್ತೇನೆ. ಸದರಿ ಆರೋಪಿಗೆ ನೀಡಿದ ಸಾಲವನ್ನು ನಾನು ಚೆಕ್ಕಿನ ಮುಖೇನ ನೀಡದೇ ನಗದಾಗಿ ನೀಡಿರುತ್ತೇನೆ. ಸದರಿ ಹಣಗಳ ಪೈಕಿ 3 ಲಕ್ಷ ಹಣವು ನನ್ನ ಮನೆಯಲ್ಲಿ ಇದ್ದು, 4 ಲಕ್ಷ ಹಣವನ್ನು ನನ್ನ ಸ್ನೇಹಿತರಾದ ಅವಿನಾಶ ಎಂಬುವವರಿಂದ ಪಡೆದುಕೊಂಡು ಕೊಟ್ಟಿರುತ್ತೇನೆ. ನನ್ನ ತಂದೆಯು ನನ್ನ ಮನೆಯ ಎಲ್ಲಾ ವ್ಯವಹಾರಗಳನ್ನು ನೋಡಿಕೊಳ್ಳುತ್ತಾರೆ. 3 ಲಕ್ಷ ಹಣವು ನನ್ನ ಉಳಿಕೆಯ ಗಳಿಕೆಯಾಗಿರುತ್ತದೆ. ನನ್ನ ಸ್ನೇಹಿತರಾದ ಅವಿನಾಶ್ ಎಂಬುವವರಿಂದ 4 ಲಕ್ಷ ಹಣವನ್ನು ಪಡೆದುಕೊಳ್ಳುವ ಸಮಯದಲ್ಲಿ ನನ್ನ ಹಾಗೂ ಅವಿನಾಶ ಮಧ್ಯೆ ಯಾವುದೇ ದಾಖಲೆಗಳು ಆಗಿರುವುದಿಲ್ಲ. ಆರೋಪಿಯು ನನಗೆ ಸದರಿ ಸಾಲವನ್ನು ಮರುಪಾವತಿ ಮಾಡದಿದ್ದರೂ, ನನ್ನ ಸ್ನೇಹಿತ ಅವಿನಾಶ

ಎಂಬುವವರಿಗೆ 4 ಲಕ್ಷ ಹಣವನ್ನು ನಾನು ಆತನಿಗೆ ಮರುಪಾವತಿ ಮಾಡಿರುತ್ತೇನೆ.. ಕಚೇರಿಯ ಕೆಲಸಕ್ಕೆ ಸಂಬಂಧಪಟ್ಟಂತೆ, ಬೆರಳಚ್ಚು ಮಾಡಲು ಕಂಪ್ಯೂಟರ್ ಅವಶ್ಯಕತೆ ಇದ್ದಲ್ಲಿ ನಾನು ಸಹೋದ್ಯೋಗಿಗಳ ಮುಖಾಂತರ ಅವರನ್ನು ಬರಲು ಹೇಳಿ ಕೆಲಸಗಳನ್ನು ಮಾಡಿಸುತ್ತೇನೆ. 2018 ಮಾರ್ಚ್ 3-4 ನೇ ವಾರದಲ್ಲಿ ನಾನು ನನ್ನ ಸ್ನೇಹಿತರಾದ ಅವಿನಾಶ ಕಡೆಯಿಂದ ಸಾಲದ ರೂಪದಲ್ಲಿ ಹಣವನ್ನು ಪಡೆದುಕೊಂಡಿರುತ್ತೇನೆ. ಆರೋಪಿಗೆ ಕೊಟ್ಟ ಸಾಲದ ಹಣದ ಮೇಲೆ ಯಾವುದೇ ಬಡ್ಡಿ ಇರುವುದಿಲ್ಲ. ಹಾಗೆ ಸ್ನೇಹಿತನಾದ ಅವಿನಾಶ ನನಗೆ ಕೊಟ್ಟ ಸಾಲದ ಮೇಲೆ ಯಾವುದೇ ಬಡ್ಡಿಯನ್ನು ನಾನು ಅವಿನಾಶ್‌ಗೆ ನೀಡಿರುವುದಿಲ್ಲ. ಸದರಿ ಸಾಲದ ಮುಖ ಬೆಲೆಯ ಬಗ್ಗೆ ನನಗೆ ತಿಳಿದಿರುವುದಿಲ್ಲ. ಆರೋಪಿಗೆ ನಾನು ಸಾಲವನ್ನು ನೀಡುವ ಸಮಯದಲ್ಲಿ ಆರೋಪಿಯಿಂದ ಯಾವ ದಾಖಲೆಗಳನ್ನು ಪಡೆದುಕೊಂಡಿರುವುದಿಲ್ಲ. ಸಾಕ್ಷಿಯು ಮುಂದುವರಿದು ಅಶೋಕ ಶೆಟ್ಟಿರವರು ನನಗೆ ಬಹಳ ಆತ್ಮೀಯರಾಗಿರುವ ಕಾರಣ ಅವರ ಮಾತಿನ ಮೇರೆಗೆ ನಾನು ಆರೋಪಿಗೆ ಸಾಲವನ್ನು ನೀಡಿರುತ್ತೇನೆ. ನಾನು ಆರೋಪಿಗೆ ಹಣವನ್ನು ನೀಡುವ , ಸಮಯದಲ್ಲಿ ಅಶೋಕ ಶೆಟ್ಟಿರವರು ವಿದೇಶದಿಂದ ಊರಿಗೆ ಬಂದು ಊರಿನಲ್ಲಿ ರಿಯಲ್ ಎಸ್ಟೇಟ್ ವ್ಯವಹಾರವನ್ನು ನಡೆಸುತ್ತಿದ್ದರು. ಪ್ರಸ್ತುತ ಅಶೋಕ ಶೆಟ್ಟಿಯವರು ವಿದೇಶದಲ್ಲಿ ಉದ್ಯೋಗವನ್ನು ಮಾಡುತ್ತಿದ್ದಾರೆ. ಆದಾಯ ತೆರಿಗೆ ಕಾಯ್ದೆ ಪ್ರಕಾರ ಪ್ರಸ್ತುತ 20 ಸಾವಿರದ ಹಣಕ್ಕೆ ಮೆಲ್ಪಟ್ಟು ಚೆಕಿನ ಮುಖಾಂತರ ವ್ಯವಹಾರ ನಡೆಸಬೇಕು ಎಂದರೆ ಸರಿ. ಹಾಗೆ ಯಾರೊಂದಿಗೆ ಹಣದ ವ್ಯವಹಾರಗಳನ್ನು ಮಾಡಬೇಕಾದರೆ ದಾಖಲೆಗಳನ್ನು ನಿರ್ವಹಿಸಬೇಕೆಂಬ ಅರಿವು ನನ್ನಲ್ಲಿ ಇರುತ್ತದೆ. ಆರೋಪಿಯ ಗಂಡನು ಬೆಂಗಳೂರಿನ ಹೋಟೇಲ್ ವ್ಯವಹಾರಣೆಯ ಕುರಿತಾಗಿ, ತಿಂಗಳ ಒಳಗಾಗಿ ಹಣವನ್ನು ಮರುಪಾವತಿ ಮಾಡುತ್ತೇನೆಂಬ ಷರತ್ತಿನ ಮೇರಿಗೆ ನಾನು ಆರೋಪಿಗೆ ಸಾಲವನ್ನು ನೀಡಿರುತ್ತೇನೆ. ಆರೋಪಿಗೆ ಸದರಿ ಸಾಲವನ್ನು ನೀಡುವ ಸಮಯದಲ್ಲಿ ಆರೋಪಿಯ ಗಂಡನಿಗೆ ಬೆಂಗಳೂರಿನಲ್ಲಿ ಹೋಟೆಲ್ ಮಾಡುತ್ತಿದ್ದಾರೆಯೇ ಎನ್ನುವ ಕುರಿತು ನಾನು ದೂರವಾಣಿ ಮುಖಾಂತರ ಆರೋಪಿಯ ಗಂಡನನ್ನು ಸಂಪರ್ಕಿಸಿರುವುದಿಲ್ಲ. ಸಾಕ್ಷಿಯು ಮುಂದುವರಿದ, ಖುದ್ದಾಗಿ ಅಶೋಕ ಶೆಟ್ಟಿರವರು ನನಗೆ ಹೇಳಿದ ಕಾರಣ ನಾನು ಬೇರೆ ಯಾವುದೇ ಮಾಹಿತಿಯನ್ನು ಕಲೆ ಹಾಕಿರುವುದಿಲ್ಲ. ಆರೋಪಿಯು ಮಲ್ಲಿಕಾ ಹಾಗೂ ಪೂರ್ಣಿಮಾರವರ ಬಳಿಯು ಕೂಡಾ ಸಾಲವನ್ನು ಪಡೆದುಕೊಂಡಿದ್ದಾರೆ ಎನ್ನುವ ಮಾಹಿತಿಯು ನನಗೆ , ನಾನು ಆರೋಪಿಗೆ ಸಾಲ ಕೊಟ್ಟ 3-4 ತಿಂಗಳ ಒಳಗಾಗಿ ತಿಳಿದಿರುತ್ತದೆ. ಆರೋಪಿಯು ಸಾಲವನ್ನು ಮರುಪಾವತಿ ಮಾಡಲು ವಿಳಂಬವಾದಾಗ , ನಾನು ಅಶೋಕ ಶೆಟ್ಟಿರವನ್ನು ಆಗಾಗ್ಗೆ ಕೇಳುತ್ತಿದ್ದು, ಸದರಿ ಅಶೋಕ ಶೆಟ್ಟಿರವರು ಆರೋಪಿಯು ಸಾಲವನ್ನು ಮರುಪಾವತಿ ಮಾಡುತ್ತಾರಂಬ ಬರವಸೆ ನೀಡಿರುತ್ತಾರೆ. ಸದರಿ ಸಾಲದ ಮರುಪಾಾವತಿಗಾಗಿ ನಾನು ಆರೋಪಿಯಿಂದ ಹಾಗೂ ಅಶೋಕ ಶೆಟ್ಟಿರವರ ಬಳಿ ಆಗಾಗ್ಗೆ ದೂರವಾಣಿ ಮುಖಾಂತರ ಕೇಳುತ್ತಿದ್ದೇನೆ. ಹಾಗೆ ನಾನು ಸಾಲವನ್ನು ಕೇಳಿದ್ದ ಸಮಯದಲ್ಲಿ ಅಶೋಕ ಶೆಟ್ಟಿರವರು ಊರಿನಲ್ಲಿ ಇದ್ದರು. ಸದರಿ ಅಶೋಕ ಶೆಟ್ಟಿರವರು ಚೆಕ್ ಅಮ್ಯಾನಗೊಂಡ 1 ತಿಂಗಳ ನಂತರ ವಿದೇಶಕ್ಕೆ ಹೋಗಿರುತ್ತಾರೆ. ಚೆಕ್ ಅಮ್ಯಾನಗೊಂಡ ನಂತರ ನನಗೂ ಹಾಗೂ ಅಶೋಕ ಶೆಟ್ಟಿರವರ ಮಧ್ಯೆ ಮಧ್ಯೆ ಮನಸ್ತಾಪವಾಗಿರುತ್ತದೆ. ಆರೋಪಿಯು ನನಗೆ ಹಣವನ್ನು

ಮರುಪಾವತಿ ಮಾಡಲು ವಿಳಂಬವಾದಾಗ , ನಾನು ಅಶೋಕ ಶೆಟ್ಟ ಹಾಗೂ ಆರೋಪಿಯೊಂದಿಗೆ ದಾಖಲೆ ಮಾಡಿಕೊಡಬೇಕಾಗಿ ವಿನಂತಿಸಿರುತ್ತೇನೆ. ಆದರೆ , ಆರೋಪಿಯು ದಾಖಲೆ ಮಾಡಲು ತಯಾರಿಲ್ಲದೆ ಸಾಲವನ್ನು ಆದಷ್ಟು ಬೇಗ ಮರುಪಾವತಿ ಮಾಡುತ್ತೇನೆಂದು ಭರವಸೆಯನ್ನು ನೀಡಿರುತ್ತಾರೆ. ನಂತರ ದಾಖಲೆಯನ್ನು ನೀಡದ ಸಮಯದಲ್ಲಿ ಅವರಿಂದ ಚೆಕ್ಕನ್ನು ಪಡೆಯಲು ಏನಾದರು ತೊಂದರೆ ಇತ್ತಾ ಎಂದರೆ ನಾನು ಭದ್ರತೆ ಸಲುವಾಗಿ ಆರೋಪಿಯ ಬಳಿ ಚೆಕ್ಕನ್ನು ಕೇಳಿರುವುದಿಲ್ಲ ಎಂದು ನುಡಿಯುತ್ತಾರೆ. ಆರೋಪಿಯು ಖುದ್ದಾಗಿ ಯಾವ ಉದ್ಯೋಗವನ್ನು ಮಾಡುತ್ತಿದ್ದಾರೆಂದು ನಾನು ತಿಳಿದಿರುವುದಿಲ್ಲ ಸಾಕ್ಷಿಯು ಮುಂದುವರಿದು ಆರೋಪಿಯ ಗಂಡ ಹೋಟೆಲ್ ಉದ್ಯಮ ನಡೆಸುತ್ತಿದ್ದಾರೆಂಬ ಎಂಬ ಬಗ್ಗೆ ಮಾಹಿತಿಯನ್ನು ತಿಳಿದಿರುತ್ತೇನೆ ಎಂದು ನುಡಿಯುತ್ತಾರೆ. ಸದರಿ ಮಾಹಿತಿಯನ್ನು ನಾನು ಆಶೋಕ ಶೆಟ್ಟಿ ಹಾಗೂ ಆರೋಪಿಯಿಂದ ಪಡೆದಿರುತ್ತೇನೆ. ಕರೂರು ವೈಶ್ಯ ಬ್ಯಾಂಕ್ , ಯೂನಿಯನ್ ಬ್ಯಾಂಕ್, ಬಂಧನ ಬ್ಯಾಂಕ್ ಮಂಗಳೂರಿನಲ್ಲಿ ಬ್ಯಾಂಕ್ ಖಾತೆಯನ್ನು ಹೊಂದಿರುತ್ತೇನೆ. 2019 ರಲ್ಲಿ ಮುಲ್ಕಿಯಲ್ಲಿ ನಾನು ಮನೆಯನ್ನು ಕ್ರಯಕ್ಕೆ ಪಡೆದುಕೊಂಡು , ಪ್ರಸ್ತುತ ಬಾಡಿಗೆಗೆ ನೀಡಿರುತ್ತೇನೆ. ಮುಲ್ಕಿಯಲ್ಲಿ ನಾನು ಯಾವುದೇ ಬ್ಯಾಂಕ್ ಖಾತೆಯನ್ನು ಹೊಂದಿರುವುದಿಲ್ಲ. ನಾನು ಮಂಗಳೂರಿನಲ್ಲಿ ಬಾಡಿಗೆ ಮನೆಯನ್ನು ಹೊಂದಿದ್ದು ವಾರಕ್ಕೊಮ್ಮೆ ಸುಳ್ಯದ ಎಡಮಂಗಲದ ಮನೆಗೆ , ಹೋಗಿ ಬಂದು ಮಾಡುತ್ತೇನೆ. 2020 ರ ನವೆಂಬರ್ ಮೊದಲ ವಾರದಲ್ಲಿ ಆರೋಪಿಯು ನನಗೆ ಚೆಕ್ಕನ್ನು ನೀಡಿರುತ್ತಾರೆ. ಸದರಿ ಚೆಕ್ಕ ಕೊಡುವ ಸಮಯದಲ್ಲಿ ಅಶೋಕ ಶೆಟ್ಟಿ , ಶಶಿಕಾಂತ್ ಶೆಟ್ಟಿಗಾರ ಹಾಗೂ ಆರೋಪಿಯು ಇದ್ದರು. ಸದರಿ ಚೆಕ್ಕನ್ನು ಆರೋಪಿಯು ಮಧ್ಯಾಹ್ನದ ವೇಳೆಯಲ್ಲಿ ನನಗೆ ನೀಡಿರುತ್ತಾರೆ. ನಿಶಾನೆ ಪಿ 1 ನ್ನು ಆರೋಪಿಯು ಬರೆದು ನನ್ನ ಮನೆಗೆ ತಂದಿದ್ದರು. ನಿಶಾನೆ ಪಿ 1 ರ ಬರವಣಿಗೆ ಯಾರದ್ದು ಎಂದು ನನಗೆ ತಿಳಿದಿರುವುದಿಲ್ಲ. ನಿಶಾನೆ ಪಿ 1 ನ್ನು ನವೆಂಬರ್ ಮೊದಲ ವಾರದಲ್ಲಿ ನೀಡಿರುತ್ತಾರೆ. ನಿಶಾನೆ ಪಿ 1 ಹಾಗೂ ಸಹಿಯ ಪೆನ್ನಿನ ಶಾಹಿ ಬೇರೆ ಬೇರೆ ಯಾಗಿರುತ್ತದೆ ಎಂದರೆ ಸರಿ ನಿಶಾನೆ ಪಿ 1 ಹಾಗೂ ನಿಶಾನೆ ಪಿ 3 ರಲ್ಲಿರುವ ಬರವಣಿಗೆಯಲ್ಲಿ ವ್ಯತ್ಯಾಸವಿದೆ ಎಂದರೆ ಸರಿಯಲ್ಲ. ನಿಶಾನೆ ಪಿ 3 ರಲ್ಲಿರುವ ಸಹಿಯು ಆರೋಪಿಯದಲ್ಲಾ ಎಂದರೆ ಸರಿಯಲ್ಲ. ನಿಶಾನೆ ಪಿ 3 ರ ನೋಟಿಸ್ಸು ಆರೋಪಿಗೆ ಜಾರಿಯಾಗಿಲ್ಲವೆಂದರೆ ಸರಿಯಲ್ಲ. ಪ್ರಸ್ತುತ ಪೂರ್ಣಿಮಾರವರ ಜೊತೆ ನನಗೆ ಸಂಪರ್ಕ ಇರುವುದಿಲ್ಲ. ಅಶೋಕ ಶೆಟ್ಟಿ , ಶಶಿಕಾಂತ ಶೆಟ್ಟಿಗಾರ , ಮಲ್ಲಿಕಾ ಮತ್ತು ಪೂರ್ಣಿಮಾರವರನ್ನು ಈ ಪ್ರಕರಣದಲ್ಲಿ ಸಾಕ್ಷಿಯನ್ನು ಮಾಡಲು ತೊಂದರೆ ಇದೆಯಾ ಎಂದರೆ ಅವರು ಯಾರು ಈಗ ನನ್ನ ಸಂಪರ್ಕದಲ್ಲಿ ಇರುವುದಿಲ್ಲವೆಂದು ನುಡಿಯುತ್ತಾರೆ. ಆರೋಪಿಯು ನನ್ನಿಂದ ಯಾವುದೇ ಹಣವನ್ನು ಪಡೆದಿಲ್ಲಾವೆಂದರೆ ಸರಿಯಲ್ಲ. ಪ್ರಪಥಮ ಬಾರಿಗೆ ಆರೋಪಿಯನ್ನು ದಿನಾಂಕ 29.09.2020 ರಂದು ಉಡುಪಿಯ ಸೈಬರ್ ಪೊಲೀಸ್ ಠಾಣೆಯಲ್ಲಿ ಪೂರ್ಣಿಮಾರವರ ಜೊತೆ ಆರೋಪಿಯು ಬಂದಾಗ ಸದರಿ ಆರೋಪಿಯನ್ನು ನಾನು ಮೊದಲ ಬಾರಿಗೆ ನೋಡಿರುತ್ತೇನೆಂದರೆ ಸರಿಯಲ್ಲ. 2018 ರಲ್ಲಿ ಪೂರ್ಣಿಮಾರವರಿಂದ ಆರೋಪಿಯು ಸಾಲವನ್ನು ಪಡೆದುಕೊಳ್ಳುವಾಗ ಭದ್ರತೆಗಾಗಿ ನೀಡಿದ ಖಾಲಿ ಚೆಕ್ಕ ಆಗಿರುತ್ತದೆ ಎಂದರೆ ಸರಿಯಲ್ಲ. ಪೂರ್ಣಿಮಾ ಹಾಗೂ ಮಲ್ಲಿಕಾರವರು ಸ್ನೇಹಿತರು

ಎಂದರೆ ನನಗೆ ಗೊತ್ತಿಲ್ಲ. ಮಲ್ಲಿಕಾರವರು ಪೂರ್ಣಿಮಾರವರೊಂದಿಗೆ ದಿನಾಂಕ 29.09.2020 ರಂದು ಉಡುಪಿಯ ಸೈಬರ್ ಪೊಲೀಸ್ ಠಾಣೆಯಲ್ಲಿ ದೂರು ನೀಡಿದ್ದು ಅದರ ಬಗ್ಗೆ ಠಾಣಾಧಿಕಾಯವರು , ಮಲ್ಲಿಕಾ , ಪೂರ್ಣಿಮಾ ರವರನ್ನು ಹಾಗೂ ಆರೋಪಿಯನ್ನು ಕರೆಯಿಸಿ ವಿಚಾರಿಸಿರುತ್ತಾರೆಂದರೆ ಸರಿಯಲ್ಲ. ಆ ಸಮಯದಲ್ಲಿ ನಾನು ಕೂಡಾ ಉಪಸ್ಥಿತಿ ಇದ್ದು ಠಾಣಾಧಿಕಾರಿಯವರು ನಮ್ಮನೆಲ್ಲಾ ವಿಚಾರಿಸಿದ್ದು ಆರೋಪಿಯು ಮಲ್ಲಿಕಾ ಹಾಗೂ ಪೂರ್ಣಿಮಾರವರಿಗೆ ಯಾವುದೇ ಹಣವನ್ನು ಕೊಡಲು ಬಾಕಿ ಇಲ್ಲ ಎಂದು ಹೇಳಿ ಸುಳ್ಳು ದೂರನ್ನು ನೀಡಿದ್ದಕ್ಕೆ ಛೀಮಾರಿ ಹಾಕಿರುತ್ತಾರೆಂದರೆ ಸರಿಯಲ್ಲ. ಹಾಗೆ ಆ ಸಮಯದಲ್ಲಿ ಮಲ್ಲಿಕಾ , ಪೂರ್ಣಿಮಾ ಹಾಗೂ ನಾನು ಅವಮಾನಿತರಾಗಿ , ದ್ವೇಷ ಸಾಧನೆಗಾಗಿ 2018 ರಲ್ಲಿ ಮಲ್ಲಿಕಾರಿಗೆ ಕೊಟ್ಟ ಖಾಲಿ ಚೆಕ್ಕನ್ನು ನಾನು ಪಡೆದುಕೊಂಡು ಈ ಪ್ರಕರಣದಲ್ಲಿ ಬಳಸಿಕೊಂಡಿದ್ದೇನೆಂದರೆ ಸರಿಯಲ್ಲ. ಪೂರ್ಣಿಮಾ ಹಾಗೂ ಮಲ್ಲಿಕಾರವರು ಈಗಲೂ ಕೂಡಾ ನನ್ನ ಸಂಪರ್ಕದಲ್ಲಿ ಇದ್ದಾರೆಂದರೆ ಸರಿಯಲ್ಲ ಅಶೋಕ ಶೆಟ್ಟಿಗೆ ಸದರಿ ಪ್ರಕರಣದ ಆರೋಪಿಯು ಪರಿಚಯವಿರುವುದಿಲ್ಲವೆಂದರೆ ಸ ರಿಯಲ್ಲ. ಸದರಿ ಪ್ರಕರಣದಲ್ಲಿ ಆರೋಪಿಯು ನನ್ನ ಕಚೇರಿಗೆ ಬಂದು ನಿಶಾನೆ ಪಿ 1 ನ್ನು ಹಾಗೂ ಹಣವನ್ನು ಪಡೆದುಕೊಳ್ಳುವ ವಿಚಾರ ಕಟ್ಟು ಕಥೆ ಆಗಿರುತ್ತದೆ ಎಂದರೆ ಸರಿಯಲ್ಲ. ಆರೋಪಿಗೆ 7 ಲಕ್ಷ ಹಣವನ್ನು ಕೊಡಲು ನನ್ನಲ್ಲಿ ಆರ್ಥಿಕ ಚೈತನ ಇಲ್ಲ ಎಂದರೆ ಸರಿಯಲ್ಲ. ಮಂಗಳೂರಿನಲ್ಲಿ ಹಲವಾರು ಬ್ಯಾಂಕ್ ಖಾತೆಗಳನ್ನು ಹೊಂದಿದ್ದರು ಕೂಡಾ ಆರೋಪಿಯನ್ನು ಸತಾಯಿಸುವ ಸಲುವಾಗಿ ಈ ಪ್ರಕರಣವನ್ನು ದಾಖಲಿಸಿರುತ್ತೆನೆಂದರೆ ಸರಿಯಲ್ಲ. ನಿಶಾನೆ ಪಿ 1 ಸೃಷ್ಟಿಸಿದ ದಾಖಲೆ ಎಂದರೆ ಸರಿಯಲ್ಲ. ಅಶೋಕ ಶೆಟ್ಟಿ ವಿದೇಶದಲ್ಲಿ ಇದ್ದಾರೆ ಎನ್ನುವ ಬಗ್ಗೆ ನಾನು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ನಾನು ಸುಳ್ಳು ಪ್ರಕರಣವನ್ನು ದಾಖಲಿಸಿ ದುರ್ಲಾಭ ಪಡೆಯಲು ಪ್ರಕರಣ ದಾಖಲಿಸಿರುತ್ತೆನೆಂದರೆ ಸರಿಯಲ್ಲ. ನಾನು ವಕೀಲರಾಗಿ ಇದ್ದು ಕೂಡಾ ಆರೋಪಿಯಿಂದ ದಾಖಲೆಗಳನ್ನು ಪಡೆದುಕೊಳ್ಳದೇ ಇರುವುದು ಸುಳ್ಳು ವ್ಯವಹಾರ ಆದ ಕಾರಣ, ಎಂದರೆ ಸರಿಯಲ್ಲ.

ತೆ.ನ್ಯಾಸಾ.ಹೇ. ನನ್ನ. ಉ.ಬೆ. ಮಾಡಲಾಯಿತು.

ಓ.ಹೇ.ಕೇ.ಸ.ಇದೆ ಎಂದು ಒಪ್ಪಿರುತ್ತಾರೆ.

ಪ್ರ.ದ.ನ್ಯಾದಂ., ಸುಳ್ಯ.